ನನಗಿರಲಿಲ್ಲ. ಅಸಲು ನನ್ನ ಕೆಲಸ ಮತ್ತು ನನ್ನ ಗಳಿಕೆ ಎರಡೂ ತೆರೆದ ಜಾತಕದಂತೆ ಅವನ ಸ್ಪ್ರೆಡ್ ಶೀಟ್‌ನಲ್ಲಿ ಹರಡಿಕೊಂಡಿರುತ್ತದೆ ಎಂದು ನನಗೆ ತಿಳಿದಿತ್ತು. 'ಅದಕ್ಕೆಂದೇ ಬರುತ್ತಿದ್ದರೂ ಇರಬಹುದು, ನರಿಯಂತಹವನು' ಅಂದುಕೊಂಡೆ.

ಆದರೆ ಒಂದಂತೂ ನಿಜ, ಅವನಿಂದ ಕಲಿಯಬೇಕಾದ ಹಲವು ವಿಚಾರಗಳಿದ್ದವು.

ಅವನು ಬಂದಾಗಲೆಲ್ಲ, ನನ್ನ ಹಿರಿಯ ಸಹೋದ್ಯೋಗಿಗಳನ್ನು ಅವನೊಡನೆ ಮಾತಾಡಲು ಮುಂದು ಮಾಡಿ ಅವನ ಮಾತಿನ ತಂತ್ರಗಾರಿಕೆಯನ್ನು ಹಿಂದೆ ಸರಿದು ಕುಳಿತು ಗಮನಿಸಿದ್ದೆ. ಎಂತಹ ಕುಶಲ ಸಂಭಾಷಣೆಕಾರ!

ಮಾತಿನ ನಡುವೆ ಅವನಿಗೆ ಉತ್ತರ ಹೇಳಲು ಇಷ್ಟವಿಲ್ಲದ ಪ್ರಶ್ನೆಗಳನ್ನು ಯಾರಾದರೂ ಕೇಳಿದರೆ, ಅವನ್ನು ಸಾರಾಸಗಟು ನಿರ್ಲಕ್ಷಿಸಿ, ಪ್ರಶ್ನೆ ಕೇಳಿದವರ ಕಣ್ಣಲ್ಲಿ ಕಣ್ಣಿಟ್ಟುಕೊಂಡು ಮಾತಾಡುತ್ತಲೇ ಅವಕ್ಕೆ ಉತ್ತರ ನೀಡಿದಂತೆ ಮಾಡುತ್ತ, ತಾನು ಹೇಳಬೇಕಾದ ಇನ್ನೇನನ್ನೋ ಹೇಳುವ ಅವನು, ಕಾಲ್ಚೆಂಡನ್ನು ಎದುರಾಳಿಗೆ ಕೊಟ್ಟಂತೆ ಮಾಡಿ ಥಟ್ಟನೆ ಬೇರೆಡೆ ಒದೆಯುವ ಆಟಗಾರನಂತೆ ಕಂಡಿದ್ದ. ಅದನ್ನೆಷ್ಟು ಸಲೀಸಾಗಿ ಮಾಡುತ್ತಿದ್ದನೆಂದರೆ ಅವನಷ್ಟೇ ಚೆನ್ನಾಗಿ ಮಾತನಾಡಲು ಬರದಿದ್ದವರು ತಾವು ಕೇಳಿದ ಪ್ರಶ್ನೆಗಳನ್ನು ಮರೆತು ಅವನು ಹೇಳಿದ ವಿಚಾರವನ್ನೇ ಉತ್ತರವೆಂದು ಬಗೆದು ಸುಮ್ಮನಾಗುತ್ತಿದ್ದರು. ಜೊತೆಗೆ ತಮ್ಮತ್ತ ಗಮನ ಕೊಟ್ಟಿದ್ದಕ್ಕಾಗಿ ಅವನಿಗೆ ವಂದಿಸುತ್ತಿದ್ದರು! ಆಡಲು ಬರುತ್ತದೆಯೆಂದಾದರೆ ಅವನ ಮಾತುಗಾರಿಕೆಯ ಆಟ ಬೇರೆಯದೇ ಸ್ವರೂಪವನ್ನು ತಾಳುತ್ತಿತ್ತು.

ಹಾಗಂತ ಬರೀ ಸುಳ್ಳು ಹೇಳುತ್ತಾನೆ ಅಂತೇನೂ ಅಲ್ಲ. ವಿಚಾರಗಳು ಈಗಾಗಲೇ ಯಾರಿಗಾದರೂ ತಿಳಿದಿದೆ ಎನ್ನುವ ಸುಳಿವು ಸಿಕ್ಕರೆ ಕೆಲವೊಮ್ಮೆ ನಿಜಗಳನ್ನೂ ಹೇಳುತ್ತಿದ್ದ! ಒಟ್ಟಿನಲ್ಲಿ ಮಾತಿನಲ್ಲೇ ಒಂದು ಪುಟ್ಟ ಸಾಮ್ರಾಜ್ಯವನ್ನು ಸೃಷ್ಟಿಸಿಕೊಂಡಿದ್ದ ಚಾಲೂಕಿನ ವ್ಯಕ್ತಿ.

ನಮಗೆ ಅವನ ಅಗತ್ಯಕ್ಕಿಂತ ಅವನ ಬ್ಯಾಂಕಿನ ಖಾತೆಗೆ ಹಣ ತುಂಬಲು ಕೆಲಸಮಾಡುವ ನಮ್ಮ ಅಗತ್ಯವೇ ಅವನಿಗೆ ಹೆಚ್ಚಿರುವುದರ ಬಗ್ಗೆ ನನಗೆ ಚೆನ್ನಾಗಿ ತಿಳಿದಿತ್ತು. ಪದಗಳನ್ನು ಜೋಡಿಸುತ್ತ ಅವನೆಷ್ಟೇ ಆಟ ಆಡಿದರೂ ಡಿಮ್ಯಾಂಡ್ ಮತ್ತು ಸಪ್ಲೈನ ಸರಪಳಿಯ ಕಸರತ್ತಿನಲ್ಲಿ ಚೆಂಡು ನಮ್ಮ ಮೈದಾನದಲ್ಲಿದ್ದುದು ನಮ್ಮ ಪುಣ್ಯವಾಗಿತ್ತು. ಇಲ್ಲದಿದ್ದಲ್ಲಿ ಕೋಟ್ಯಧಿಪತಿಯಾಗಿದ್ದ ಅವನು ನಮ್ಮನ್ನು ಇಷ್ಟೇ ಆಸ್ಥೆಯಿಂದ ಮಾತಾಡಿಸುತ್ತಿದ್ದನೇ? ಅಂತ ಬಹಳ ಸಲ ಅನ್ನಿಸುತ್ತಿತ್ತು.

ಅವನು ಏನನ್ನು ಮಾತನಾಡಲು ಬರುತ್ತಿದ್ದಾನೆ ಎಂದು ಊಹಿಸಲು ಪ್ರಯತ್ನಿಸಿದೆ. ಹಣದ ಕುರಿತ ವಿಚಾರವಿರಬೇಕು; ಹಣವೊಂದೇ ಅವನಿಗೆ ಅರ್ಥವಾಗುವ ವಿಚಾರ. ಅಸಲು ನನ್ನಂತೆ ಅವನೂ ವೈದ್ಯನೇ. ಮೊದಲೆಲ್ಲ ವೈದ್ಯ ವೃತ್ತಿ ಮಾಡುತ್ತಿದ್ದವನು ಸರಣಿ ಆಸ್ಪತ್ರೆಯ ಚಕ್ಕರಿಗೆ ಬಿದ್ದ ನಂತರ ಬರೀ ಆಡಳಿತಕ್ಕಷ್ಟೇ ಸೀಮಿತನಾಗಿದ್ದ.

ಅವನು ನಡೆಸುತ್ತಿದ್ದ ಸರಣಿ ಕಾರ್ಪೊರೇಟ್ ಆಸ್ಪತ್ರೆಯೊಂದರಲ್ಲಿ ನಾನು ವಾರದಲ್ಲಿ ಎರಡು ದಿನ ಕೆಲಸಮಾಡುತ್ತಿದ್ದ ಒಬ್ಬ ಕಿರಿಯ ವೈದ್ಯನಾಗಿದ್ದೆ.

★★★

"ಹಾಂ ಡಾಕ್ಟರ್, ನಾನು ನಿಮಗೆ ತೊಂದರೆ ಕೊಡುತ್ತಿಲ್ಲ ತಾನೇ?" ಅಂತ ಕೋಣೆಯೊಳಗೆ ಬಂದ. ಬೇರೆ ಯಾರಾದರೂ ಆಗಿದ್ದರೆ ಅದನ್ನು ಸೌಜನ್ಯ ಅಂತ ಬಗೆಯುತ್ತಿದ್ದೆ. ಅವನ ಬಗ್ಗೆ ನನಗೆ ಇದ್ದ ಪೂರ್ವಗ್ರಹಗಳ ಲೆಕ್ಕದಲ್ಲಿ ಅದು, 'ತೊಂದರೆ ಕೊಡಲು ಬರುತ್ತಿದ್ದೇನೆ' ಎಂದು ನಾಗರಿಕತೆಯ ನವಿರಿನಲ್ಲಿ ಹೇಳಿದಂತೆ ಕೇಳಿಸಿತು.

"ಖಂಡಿತ ಇಲ್ಲ, ದಯವಿಟ್ಟು ಬನ್ನಿ, ನಿಮಗೆ ಬೇಕಾದಷ್ಟು ಸಮಯ ತಗೊಳ್ಳಿ" ಅಂತ ಅಷ್ಟೇ ನಿಖರವಾಗಿ ಹೇಳಿದೆ. ಅವನ ನಿಪುಣ ಕಿವಿಗಳಿಗೆ ಅದು, 'ಐ ಡೋಂಟ್ ಕೇರ್, ಬೇಗ ಮುಗಿಸಿ'